ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೪ಎ Part – IVA	ಬೆಂಗಳೂರು, ಸೋಮವಾರ, ೨೪, ಆಗಸ್ಟ್, ೨೦೨೬ (ಭಾದ್ರಪದ, ೦೨, ಶಕವರ್ಷ, ೧೯೪೮) BENGALURU, MONDAY, 24, AUGUST, 2026 (BHADRAPADA , 02, SHAKAVARSHA, 1948)	ನಂ. ೭೬೨ No. 762

ಕರ್ನಾಟಕ ವಿಧಾನಸಭೆ

ಹದಿನಾರನೇ ವಿಧಾನಸಭೆ

ಹತ್ತನೇ ಅಧಿವೇಶನ

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2026

(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–19)

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ ಸಂ. 45)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಪ್ರಕರಣ 2ರ ತಿದ್ದುಪಡಿ.- ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ ಸಂ. 45)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) ಖಂಡ (iಎ) ರಲ್ಲಿ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)," ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ತರುವಾಯ, "ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025 ಕರ್ನಾಟಕ ಅಧಿನಿಯಮ 36), ನೀರು (ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ) ಅಧಿನಿಯಮ, 1974 (1974ರ ಕೇಂದ್ರ ಅಧಿನಿಯಮ 6), ವಾಯು (ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ) ಅಧಿನಿಯಮ, 1981 (1981ರ ಕೇಂದ್ರ ಅಧಿನಿಯಮ, 14), ಪರಿಸರ (ಸಂರಕ್ಷಣೆ) ಅಧಿನಿಯಮ, 1986 (1986 ಕೇಂದ್ರ ಅಧಿನಿಯಮ,

29), ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಸೇರಿಸತಕ್ಕದ್ದು.

(ii) ಖಂಡ (iಎ) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(i-ಬಿ) "ಅರ್ಜಿದಾರ" ಎಂದರೆ, ಯಾವುದೇ ಅನುಮೋದನೆ, ಒಪ್ಪಿಗೆ ನೀಡಿಕೆ, ಲೈಸೆನ್ಸು, ಅನುಮತಿ, ಸಮ್ಮತಿ, ನೋಂದಣಿ, ಪ್ರಮಾಣಪತ್ರ, ಸ್ವೀಕೃತಿ ಅಥವಾ ಇತರ ಸೇವೆಗಳನ್ನು ಪಡೆಯಲು ಈ ಅಧಿನಿಯಮದಡಿ ಅರ್ಜಿಯನ್ನು ಸಲ್ಲಿಸುವ ಉದ್ಯಮಿ, ವ್ಯಕ್ತಿ, ವ್ಯಕ್ತಿಗಳ ನಿಕಾಯ, ಕಂಪನಿ, ಸಹಭಾಗಿತ್ವದ ಫರ್ಮ್, ಪರಿಮಿತಿ ಹೊಣೆಗಾರಿಕೆ ಸಹಭಾಗಿತ್ವ ಅಥವಾ ಇತರ ವ್ಯಾವಹಾರಿಕ ಘಟಕ."

(iii) ಖಂಡ (ii)ಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ii) "ಪ್ರಾಧಿಕಾರ" ಎಂದರೆ, ಯಾವುದೇ ಒಪ್ಪಿಗೆ ನೀಡಿಕೆ, ಲೈಸೆನ್ಸು, ನೋಂದಣಿ, ಪರ್ಮಿಟ್ಟು, ಸಮ್ಮತಿ, ದೃಢೀಕರಣ ಅಥವಾ ಸೇವೆಯ ಆಡಳಿತ ನಿರ್ವಹಿಸಲು, ಮಂಜೂರುಮಾಡಲು, ನೀಡಲು, ಅನುಮೋದಿಸಲು, ನವೀಕರಿಸಲು, ತಿದ್ದುಪಡಿ ಮಾಡಲು ಅಥವಾ ಅನ್ಯಥಾ ಅಧಿಕಾರ ಅಥವಾ ಜವಾಬ್ದಾರಿಯನ್ನು ವಹಿಸಿರುವ ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಗಳು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂಥ ಇತರ ಪ್ರಾಧಿಕಾರಗಳನ್ನು ಒಳಗೊಂಡಂತೆ, ರಾಜ್ಯ ಸರ್ಕಾರದ ಮೂಲಕ ಅಥವಾ ಅದರಡಿಯಲ್ಲಿ ಸ್ಥಾಪಿಸಲಾದ ಯಾವುದೇ ಇಲಾಖೆ, ಮಂಡಳಿ, ನಿಗಮ, ಸ್ಥಳೀಯ ಪ್ರಾಧಿಕಾರ, ಶಾಸನಬದ್ಧ ನಿಕಾಯ, ಕಚೇರಿ, ಏಜೆನ್ಸಿ ಅಥವಾ ಇತರ ಪ್ರಾಧಿಕಾರ;"

(iv) ಹಾಗೆ ಪ್ರತಿಯೋಜಿಸಿದ (ii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ii-ಎ) "ಕೇಂದ್ರೀಯ ತಪಾಸಣಾ ವ್ಯವಸ್ಥೆ" ಎಂದರೆ, ತಪಾಸಣಾ ವೇಳಾಪಟ್ಟಿ ತಯಾರಿಕೆ, ತಪಾಸಣಾ ಅಧಿಕಾರಿಗಳ ಹಂಚಿಕೆ, ತಪಾಸಣಾ ವರದಿಗಳ ಸಲ್ಲಿಕೆ, ಲೆಕ್ಕಪರಿಶೋಧನೆ ದಾಖಲೆಗಳ ನಿರ್ವಹಣೆ ಮತ್ತು ರಾಜ್ಯಸರ್ಕಾರವು ಅಧಿಸೂಚಿಸಬಹುದಾದಂಥ ಇತರ ವಿಷಯಗಳನ್ನು ಒಳಗೊಂಡು, ಪ್ರಾಧಿಕಾರಗಳು ತಪಾಸಣೆಗಳನ್ನು ಗುರುತಿಸಲ, ವೇಳಾಪಟ್ಟಿ ನಿಗದಿಪಡಿಸಲು, ಹಂಚಿಕೆ ಮಾಡಲು, ನಡೆಸಲು, ದಾಖಲಿಸಲು ಮತ್ತು ಮೇಲ್ವಿಚಾರಣೆ ಮಾಡಲು ಏಕಗವಾಕ್ಷಿ ವ್ಯವಸ್ಥೆಯ ಮೂಲಕ ಅನುಷ್ಠಾನಗೊಳಿಸಿದ ಅಪಾಯ ಆಧಾರಿತ, ತಂತ್ರಜ್ಞಾನ ಚಾಲಿತ ವ್ಯವಸ್ಥೆ;"

(v) ಖಂಡ (vi) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vi-ಎ) "ಸೌಲಭ್ಯ ಕೇಂದ್ರ" ಎಂದರೆ, ಅನುಮೋದನೆಗಳು ಮತ್ತು ಒಪ್ಪಿಗೆ ನೀಡಿಕೆಗಳನ್ನು ಪಡೆಯುವುದಕ್ಕಾಗಿ ಮಾಹಿತಿ, ನೆರವು ಮತ್ತು ಸಮನ್ವಯವನ್ನು ಒದಗಿಸುವ ಮೂಲಕ ಹೂಡಿಕೆದಾರರನ್ನು ಬೆಂಬಲಿಸಲು ಕೈಗಾರಿಕಾ ಇಲಾಖೆಯೊಳಗೆ ಹೂಡಿಕೆದಾರರಿಗಾಗಿ ಇರುವ ಸಹಾಯವಾಣಿ ಕೇಂದ್ರ;

(vi) ಖಂಡ (vii) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vii-ಎ) "ಹೂಡಿಕೆ ಅನುಮೋದನಾ ಸಮಿತಿ" ಎಂದರೆ, 3ನೇ ಪ್ರಕರಣದಡಿ ರಚಿಸಲಾದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, 6ನೇ ಪ್ರಕರಣದಡಿ ರಚಿಸಲಾದ ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಸಂದರ್ಭಾನುಸಾರ, 9ನೇ ಪ್ರಕರಣದಡಿ ರಚಿಸಲಾದ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ;"

(vii) ಹಾಗೆ ಸೇರಿಸಲಾದ (vii-ಎ) ಖಂಡದ ತರುವಾಯ, ಈಗಾಗಲೇ ಇರುವ "(vii-ಎ)" ಮತ್ತು "(vii-ಬಿ)" ಖಂಡಗಳನ್ನು ಅನುಕ್ರಮವಾಗಿ "(vii-ಬಿ)" ಮತ್ತು "(vii-ಸಿ)" ಎಂಬುದಾಗಿ ಮರುಸಂಖ್ಯೆ ನೀಡತಕ್ಕದ್ದು.

(viii) ಖಂಡ (viii) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(viii-ಎ)"ಏಕಗವಾಕ್ಷಿ ವ್ಯವಸ್ಥೆ" ಎಂದರೆ, ಅರ್ಜಿದಾರರಿಗೆ ಅನುಮೋದನೆಗಳು, ಒಪ್ಪಿಗೆ ನೀಡಿಕೆಗಳು, ಲೈಸೆನ್ಸುಗಳು, ಅನುಮತಿಗಳು, ಸಮ್ಮತಿಗಳು, ನೋಂದಣಿಗಳು, ನವೀಕರಣಗಳು, ವರ್ಗಾವಣೆಗಳು, ತಿದ್ದುಪಡಿಗಳು, ರದ್ದತಿಗಳು ಅಥವಾ ಒಪ್ಪಿಸುವಿಕೆಗಳು, ತಪಾಸಣೆಗಳು, ಅನುಪಾಲನೆಯ ನಿರ್ವಹಣೆ, ಪ್ರೋತ್ಸಾಹಕಗಳು, ಸಲ್ಲಿಕೆಗಳು, ವಿವರಪಟ್ಟಿಕೆಗಳ ಸಲ್ಲಿಕೆ, ಪ್ರಶ್ನೆಗಳಿಗೆ ಉತ್ತರಗಳು ಮತ್ತು ಕುಂದುಕೊರತೆಯ ಪರಿಹಾರಕ್ಕಾಗಿ ಅರ್ಜಿಸಲ್ಲಿಸಲು, ಅದರ ಜಾಡುಪತ್ತೆ, ನಿರ್ವಹಣೆಗೆ ಮತ್ತು ಪಡೆಯುವುದಕ್ಕೆ ಹಾಗೂ ಲೆಕ್ಕಪರಿಶೋಧನೆಗಳ ದಾಖಲೆಗಳೊಂದಿಗೆ ವ್ಯವಹಾರದ ಎಲ್ಲಾ ಹಂತಗಳಲ್ಲೂ ಅನುಸರಣಾ ಅಗತ್ಯತೆಗಳನ್ನು ಪೂರ್ಣಗೊಳಿಸುವ ಕರ್ತವ್ಯ-ಆಧಾರಿತ ಪ್ರವೇಶ ಹಾಗೂ ಅರ್ಜಿದಾರ ಮತ್ತು ಸಂಬಂಧಿತ ಅಧಿಕಾರಿಗಳ ನಡುವೆ ಭೌತಿಕ ಸಂಪರ್ಕವನ್ನು ಕಡಿಮೆ ಮಾಡುವ ಅರ್ಜಿದಾರರಿಗಾಗಿ ಕಲ್ಪಿಸಲಾದ ಒಂಟಿ ಮಾರ್ಗ ಪ್ರವೇಶಿಕೆಯ ಏಕ ನಿಲುಗಡೆ ಡಿಜಿಟಲ್ ವೇದಿಕೆ;

ಟಿಪ್ಪಣಿ: ಏಕಗವಾಕ್ಷಿ ವ್ಯವಸ್ಥೆಯಲ್ಲಿ ದೊರೆಯುವ ಎಲ್ಲಾ ಸೇವೆಗಳಿಗಾಗಿ, ಅಸಾಧಾರಣಾ ಸನ್ನಿವೇಶಗಳು ಮತ್ತು ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದಂಥ ವಿಧಾನದ ಹೊರತಾಗಿ ಅರ್ಜಿಗಳ ಸ್ವೀಕಾರ ಅಥವಾ ನಿರ್ವಹಣೆಗಾಗಿ ಯಾವುದೇ ಪರ್ಯಾಯವಾದ ಭೌತಿಕ ಅಥವಾ ಆಫ್‌ಲೈನ್ ವಿಧಾನವಿರತಕ್ಕದ್ದಲ್ಲ.

(viii-ಬಿ) "ನಿರ್ದಿಷ್ಟಪಡಿಸಿದ ಕಾಲಮಿತಿ" ಎಂದರೆ, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 (2011ರ ಕರ್ನಾಟಕ ಅಧಿನಿಯಮ 01)ರಡಿ ಅಥವಾ ಅನ್ವಯವಾಗುವ ಕಾನೂನುಗಳು, ನಿಯಮಗಳು, ಅಧಿಸೂಚನೆಗಳು, ಆದೇಶಗಳು ಅಥವಾ ಸಂಬಂಧಪಟ್ಟ ಸೇವೆಯ ಆಡಳಿತಾತ್ಮಕ ಮಾರ್ಗಸೂಚಿಗಳಡಿ ಅಂಥ ಸೇವೆಯನ್ನು ನಿರ್ದಿಷ್ಟ ಸಮಯದೊಳಗೆ ಒದಗಿಸುವುದಕ್ಕಾಗಿ ಅಗತ್ಯಪಡಿಸಲಾಗಿರುವ, ಕಾಲಮಿತಿ;

3. ಪ್ರಕರಣ 11ಎ ತಿದ್ದುಪಡಿ.- ಮೂಲ ಅಧಿನಿಯಮದ 11ಎ ಪ್ರಕರಣದಲ್ಲಿ,-

(i) ಉಪಪ್ರಕರಣ (1)ರ (ಎ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎ-ಎ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು- ಸಹ ಅಧ್ಯಕ್ಷರು"

(ii) ಉಪಪ್ರಕರಣ (2)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2-ಎ) ಸಮಿತಿಯು ಎರಡು ತಿಂಗಳಿಗೆ ಒಮ್ಮೆ ಅಥವಾ ನಿಯತ ಮಧ್ಯಂತರಗಳಲ್ಲಿ ಅಗತ್ಯಪಡಿಸಬಹುದಾದ ಅಂಥ ಸಮಯಗಳಲ್ಲಿ ಅಥವಾ ಅಂಥ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಹಾಗೂ ಅದರ ಕಲಾಪಗಳ ನಿರ್ವಹಣೆಗೆ ನಿಯಮಿಸಬಹುದಾದಂಥ ಕಾರ್ಯವಿಧಾಗಳನ್ನು ಅಳವಡಿಸಿಕೊಳ್ಳತಕ್ಕದ್ದು."

(iii) ಉಪಪ್ರಕರಣ (3)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯ ಪ್ರಕಾರ್ಯಗಳು,-

(i) ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಮತ್ತು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗಳು ಒಪ್ಪಿಗೆ ನೀಡಿದ ಪ್ರಾಜೆಕ್ಟುಗಳ ಅನುಷ್ಠಾನದ ಸ್ಥಿತಿಗತಿಗಳನ್ನು ಮೇಲ್ವಿಚಾರಣೆ ಮಾಡತಕ್ಕದ್ದು;

(ii) ಏಕಗವಾಕ್ಷಿ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ಪುನರೀಕ್ಷಣೆ ಮತ್ತು ಮೇಲ್ವಿಚಾರಣೆ ಮಾಡತಕ್ಕದ್ದು;

(iii) ಆನ್‌ಲೈನ್ ಚಾಲಿತ ಸೇವೆಗಳು ಮತ್ತು ಏಕ ಗವಾಕ್ಷಿ ವ್ಯವಸ್ಥೆಯೊಂದಿಗೆ ಅವುಗಳ ಸಂಯೋಜನೆಗಾಗಿ ಇಲಾಖೆಗಳು ಮತ್ತು ಪ್ರಾಧಿಕಾರಗಳಿಗೆ ನಿರ್ದೇಶನಗಳನ್ನು ಹೊರಡಿಸತಕ್ಕದ್ದು;

(iv) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

(iv) ಉಪಪ್ರಕರಣ (3)ನ್ನು ಹಾಗೆ ಪ್ರತಿಯೋಜಿಸಿದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4) ಯಾವುದೇ ಆಂತರಿಕ ಸೂಚನೆಗಳು ಅಥವಾ ಕಾರ್ಯಕಾರಿ ಆದೇಶಗಳಲ್ಲಿ ಇರುವುದಾವುದೂ, ಈ ಅಧಿನಿಯಮದಡಿ ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯು ಹೊರಡಿಸಿದ ಅನ್ವಯವಾಗುವ ಕಾನೂನು, ನಿರ್ದೇಶನಗಳು ಮತ್ತು ಆದೇಶಗಳ ಮೂಲ ಉಪಬಂಧಗಳಿಗೆ ಯಾವಾಗಲೂ ಒಳಪಟ್ಟಂತೆ, ಸಂಬಂಧಪಟ್ಟ ಇಲಾಖೆಗಳು, ಪ್ರಾಧಿಕಾರಗಳು ಮತ್ತು ಏಜೆನ್ಸಿಗಳು ಬದ್ಧವಾಗಿರತಕ್ಕದ್ದು."

4. ಪ್ರಕರಣ 12ರ ತಿದ್ದುಪಡಿ.- ಮೂಲ ಅಧಿನಿಯಮದ 12ನೇ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ರಾಜ್ಯಮಟ್ಟದ ನೋಡಲ್ ಏಜೆನ್ಸಿಯು ಸ್ಥಾಪನೆ ಪೂರ್ವದ, ಸ್ಥಾಪನೆಯ ನಂತರದ ಮತ್ತು ಕಾರ್ಯಾಚರಣೆ ಹಂತದ ಎಲ್ಲಾ ಅನುಮೋದನೆಗಾಗಳಿಗಾಗಿ ನೋಡಲ್ ಏಜೆನ್ಸಿಯಾಗಿರತಕ್ಕದ್ದು. ರಾಜ್ಯಮಟ್ಟದ ನೋಡಲ್ ಏಜೆನ್ಸಿಯು ಪ್ರಾಜೆಕ್ಟ್‌ನ ಸಂಪೂರ್ಣ ವೃತ್ತಾಂತಗಳಲ್ಲಿ ಹೂಡಿಕೆದಾರರಿಗೆ ಸೌಲಭ್ಯ ಮತ್ತು ಮಾರ್ಗದರ್ಶನ ಒದಗಿಸಲು ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದ ಅಥವಾ ರಾಜ್ಯಸರ್ಕಾರವು ಅಧಿಸೂಚಿಸಿದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳೊಂದಿಗೆ ಸಮನ್ವಯ ಸಾಧಿಸಲು ಅಧಿಕೃತವಾಗಿರತಕ್ಕದ್ದು.

(3) ರಾಜ್ಯ ನೋಡಲ್ ಏಜೆನ್ಸಿಗೆ ಮುಖ್ಯಸ್ಥನಾಗಿ ರಾಜ್ಯಸರ್ಕಾರವು ನೇಮಕ ಮಾಡಿದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಇರತಕ್ಕದ್ದು, ಹಾಗೂ ಆತನು ರಾಜ್ಯ ನೋಡಲ್ ಏಜೆನ್ಸಿಗೆ ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರತಕ್ಕದ್ದು:

ಪರಂತು, ಅಂಥ ಅಧಿಕಾರಿಯು ಭಾರತೀಯ ಆಡಳಿತ ಸೇವೆಯ ಸೂಪರ್ ಟೈಮ್ ಶ್ರೇಣಿ ದರ್ಜೆಗಿಂತ ಕಡಿಮೆಯಿಲ್ಲದ ಅಧಿಕಾರಿಯಾಗಿರತಕ್ಕದ್ದು.

(4) ರಾಜ್ಯ ನೋಡಲ್ ಏಜೆನ್ಸಿಯು ಸಂಬಂಧಪಟ್ಟ ಇಲಾಖೆಗಳಿಂದ ಅಧಿಕಾರಿಗಳನ್ನು ಹೊಂದಿರುವ, ಅದಕ್ಕೆ ಮೀಸಲಾದ ಸಮನ್ವಯ ಸಮಿತಿಯ ನೆರವನ್ನು ಪಡೆಯತಕ್ಕದ್ದು.

(5) ರಾಜ್ಯ ನೋಡಲ್ ಏಜೆನ್ಸಿಯು, ಅನುಮೋದನೆಗಾಗಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯದ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸುವ ಏಕ-ಮಾರ್ಗ ಸಂಪರ್ಕವಾಗಿ ಮೂರನೇ ಪಕ್ಷಕಾರರ ನೆರವಿನೊಂದಿಗೆ ಸಮರ್ಪಿತ ಸೌಲಭ್ಯ ಕೇಂದ್ರವನ್ನು ಸ್ಥಾಪಿಸತಕ್ಕದ್ದು."

5. ಪ್ರಕರಣ 13ರ ತಿದ್ದುಪಡಿ.- ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(i) ಖಂಡ (2)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2-ಎ) ರಾಜ್ಯ ನೋಡಲ್ ಏಜೆನ್ಸಿಯು ರಾಷ್ಟ್ರೀಯ ಏಕ ಗವಾಕ್ಷಿ ವ್ಯವಸ್ಥೆ ಮತ್ತು ಪ್ರಾಧಿಕಾರಗಳ ಡಿಜಿಟಲ್ ವ್ಯವಸ್ಥೆಯೊಂದಿಗೆ ಸಂಯೋಜಿಸುವ, ಸುರಕ್ಷಿತ, ಒತ್ತಡ ನಿರ್ವಹಣಾ ಸಾಮರ್ಥ್ಯದ ಹಾಗೂ ಅಪ್ಲಿಕೇಷನ್ ಪ್ರೋಗ್ರಾಮಿಂಗ್ ಇಂಟರ್‌ಫೇಸ್ (ಎಪಿಐ) ಚಾಲಿತ ಏಕಗವಾಕ್ಷಿ ವ್ಯವಸ್ಥೆಯನ್ನು ವಿನ್ಯಾಸಗೊಳಿಸತಕ್ಕದ್ದು ಅಭಿವೃದ್ಧಿಪಡಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2-ಬಿ) ರಾಜ್ಯ ನೋಡಲ್ ಏಜೆನ್ಸಿಯು, ಸಂಬಂಧಪಟ್ಟ ಕಾನೂನುಗಳಡಿ ಅಂಥ ಪ್ರಾಧಿಕಾರಗಳಿಗೆ ಪ್ರದತ್ತವಾದ ತಪಾಸಣೆ, ಪರಿಶೀಲನೆ ಮತ್ತು ಜಾರಿಗೊಳಿಸುವ ಶಾಸನಬದ್ಧ ಅಧಿಕಾರಗಳಿಗೆ ಬಾಧಕವಾಗದಂತೆ, ಪ್ರಾಧಿಕಾರಗಳ ಸಮನ್ವಯದೊಂದಿಗೆ, ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಕೇಂದ್ರ ತಪಾಸಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸತಕ್ಕದ್ದು ಮತ್ತು ಆಡಳಿತ ನಿರ್ವಹಿಸತಕ್ಕದ್ದು.

(2-ಸಿ) ಏಕ ಗವಾಕ್ಷಿ ವ್ಯವಸ್ಥೆಯು ಏಕ ಪ್ರವೇಶಿಕೆ, ಲೆಕ್ಕಪರಿಶೋಧನೆ ದಾಖಲೆಗಳು, ಡ್ಯಾಶ್-ಬೋರ್ಡ್‌ಗಳು ಮತ್ತು ಕರ್ತವ್ಯ-ಆಧಾರಿತ ಪ್ರವೇಶಿಕೆ ನಿಯಂತ್ರಣಗಳನ್ನು ಕಲ್ಪಿಸತಕ್ಕದು ಹಾಗೂ

ಸಂಪೂರ್ಣ ವ್ಯವಹಾರದ ವೃತ್ತಾಂತದ ಎಲ್ಲಾ ಹಂತಗಳಲ್ಲಿ ನೋಂದಣಿ, ಅನುಮೋದನೆ, ನವೀಕರಣ, ವರ್ಗಾವಣೆ, ತಿದ್ದುಪಡಿ, ರದ್ದಿಯಾತಿ ಮತ್ತು ಹಿಂದಿರುಗಿಸುವುದನ್ನು ಒಳಗೊಂಡಂತೆ ಆರಂಭದಿಂದ ಅಂತ್ಯದವರೆಗಿನ ಸೇವೆಗಳ ಸೌಲಭ್ಯ ಒದಗಿಸತಕ್ಕದ್ದು.

(2-ಡಿ) ರಾಜ್ಯ ನೋಡಲ್ ಏಜೆನ್ಸಿಯು ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ 'ನಿಮ್ಮ ಅನುಮೋದನೆಗಳನ್ನು ತಿಳಿಯಿರಿ' ಮೋಡ್ಯುಲ್-ಅನ್ನು, ಕಡ್ಡಾಯ ಲಾಗಿನ್ ಹೊರತಾದ ಪ್ರವೇಶಿಸುವಿಕೆಗಾಗಿ ಅರ್ಜಿದಾರನಿಗೆ ಸಾಧ್ಯವಾಗುವಂತೆ ಖಚಿತಪಡಿಸಿಕೊಳ್ಳುವುದನ್ನು, ಅಂಥ ಅರ್ಜಿದಾರನು ಒದಗಿಸಿದ ಮಾಹಿತಿಯ ಆಧಾರದ ಮೇಲೆ ಪ್ರಾಥಮಿಕ ಅನುಮೋದನೆಗಳು, ಒಪ್ಪಿಗೆ ನೀಡಿಕೆಗಳು, ಲೈಸೆನ್ಸುಗಳು, ಅನುಮತಿಗಳು, ನೋಂದಣಿಗಳು, ಸಮ್ಮತಿಗಳು, ಪ್ರಮಾಣಪತ್ರಗಳು, ತಪಾಸಣೆಗಳು ಮತ್ತು ಪ್ರಸ್ತಾವಿತ ಕೈಗಾರಿಕೆ, ಉದ್ದಿಮೆ, ಪ್ರಾಜೆಕ್ಟ ಅಥವಾ ಚಟುವಟಿಕೆಗೆ ಅನ್ವಯವಾಗಬಹುದಾದಂತಹ ಅನುಪಾಲನೆಗಳನ್ನು ಒದಗಿಸತಕ್ಕದ್ದು:

ಪರಂತು, "ನಿಮ್ಮ ಅನುಮೋದನೆಗಳನ್ನು ತಿಳಿಯಿರಿ" ಮೋಡ್ಯೂಲ್ ಮೂಲಕ ಬಂದ ಫಲಿತಾಂಶವು ಪ್ರಾಥಮಿಕ ಸ್ವರೂಪದ್ದಾಗಿರತಕ್ಕದ್ದು ಹಾಗೂ ಸ್ವತಃ ತಾನಾಗಿಯೇ ಹಕ್ಕು ಪ್ರದಾನ, ಅನುಮೋದನೆ, ವಿನಾಯಿತಿ ಅಥವಾ ಯಾವುದೇ ಅನ್ವಯವಾಗುವ ಕಾನೂನಿನ ಅನುಪಾಲನೆಯಿಂದ ರಕ್ಷಣೆಯನ್ನು ನೀಡತಕ್ಕದ್ದಲ್ಲ.

(2-ಇ) ರಾಜ್ಯ ನೋಡಲ್ ಏಜೆನ್ಸಿಯು, ರಾಜ್ಯ ಸರ್ಕಾರವು ಅಧಿಸೂಚಿಸಬಹುದಾದ ಅಂಥ ಮಾಹಿತಿ, ದಸ್ತಾವೇಜುಗಳು, ಅಧಿಕೃತ ವಿವರಗಳು, ಪ್ರಮಾಣಪತ್ರಗಳು, ನೋಂದಣಿಗಳು ಮತ್ತು ಗುರುತಿನ ವಿವರಗಳನ್ನು ಒಳಗೊಂಡಿರುವ ವ್ಯವಹಾರ ಬಳಕೆದಾರರಿಗೆ ಕೇಂದ್ರೀಕೃತ ಭಂಡಾರವಾಗಿರುವ ನಿಮ್ಮ ಗ್ರಾಹಕನನ್ನು ತಿಳಿಯಿರಿ (ಕೆವೈಸಿ) ಎಂಬ ವ್ಯವಸ್ಥೆಯನ್ನು ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

ಟಿಪ್ಪಣಿ: ಅಂಥ ಭಂಡಾರದಲ್ಲಿ ಲಭ್ಯವಿರುವ ಮಾಹಿತಿ ಅಥವಾ ದಸ್ತಾವೇಜುಗಳು ಖಾಸಗಿತನ, ದತ್ತಾಂಶ ಸಂರಕ್ಷಣೆ, ಒಪ್ಪಿಗೆ, ಗೌಪ್ಯತೆ, ಭದ್ರತೆ ಮತ್ತು ಪ್ರವೇಶಿಕೆಯ ನಿಯಂತ್ರಣಕ್ಕೆ ಸಂಬಂಧಿಸಿದ ಅನ್ವಯವಾಗಬಹುದಾದ ಕಾನೂನುಗಳಿಗೆ ಒಳಪಟ್ಟಿದ್ದು, ಅರ್ಜಿಗಳ ಪರಿಶೀಲನೆ ಮತ್ತು ಪರಿಷ್ಕರಣೆಗಾಗಿ ಪ್ರಾಧಿಕಾರಗಳು ಬಳಸಿಕೊಳ್ಳಲಾಗುವ ಹಾಗೂ ಯಾರೇ ಅರ್ಜಿದಾರನು ಅಂಥ ಮಾಹಿತಿ ಅಥವಾ ದಾಖಲೆಯನ್ನು ಪ್ರಸ್ತುತ ಹಂತವನ್ನು ನವೀಕರಿಸುವ, ಸಿಂಧುಗೊಳಿಸುವ, ಇಂದೀಕರಿಸುವ ಅಥವಾ ಪರಿಶೀಲಿಸುವ ಹೊರತಾಗಿ ಅದೇ ಮಾಹಿತಿ ಅಥವಾ ದಸ್ತಾವೇಜನ್ನು ಒಂದಕ್ಕಿಂತ ಹೆಚ್ಚುಬಾರಿ ಸಲ್ಲಿಸತಕ್ಕದ್ದಲ್ಲ.

(2-ಎಫ್) ರಾಜ್ಯ ನೋಡಲ್ ಏಜೆನ್ಸಿಯು ಅನುಮೋದನೆಯ ಕಾಲಮಿತಿಗಳನ್ನು ಕಡಿಮೆ ಮಾಡಲು, ಸೇವೆಯ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಅನುಪಾಲನೆಯ ಹೊರೆಯನ್ನು ಕಡಿಮೆಮಾಡಲು ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಮಾರ್ಗಗೊಳಿಸಿದ ಎಲ್ಲಾ ವ್ಯವಹಾರ ಕೇಂದ್ರಿತ ಸೇವೆಗಳಿಗಾಗಿ ಬಿಡುಗಾಲ ಮಧ್ಯಾವಧಿ (TAT)ಯನ್ನು ಮೇಲ್ವಿಚಾರಣೆ ನಡೆಸತಕ್ಕದ್ದು.

(2-ಜಿ) ರಾಜ್ಯ ನೋಡಲ್ ಏಜೆನ್ಸಿಯು ಏಕ ಗವಾಕ್ಷಿ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನ, ಕಾರ್ಯಾಚರಣೆ ಮತ್ತು ಆಡಳಿತ ನಿರ್ವಹಣೆಗಾಗಿ ನಿಯಮಿಸಬಹುದಾದಂಥ ವಿಧಾನದಲ್ಲಿ ಮಾರ್ಗಸೂಚಿಗಳು ಮತ್ತು ನಿರ್ದಿಷ್ಟ ಕಾರ್ಯಾಚರಣೆಯ ಕಾರ್ಯವಿಧಾನಗಳನ್ನು ರೂಪಿಸತಕ್ಕದ್ದು.

(2-ಎಚ್) ಉಪಪ್ರಕರಣ (1) ಮತ್ತು (2)ಕ್ಕೆ ಬಾಧಕವಾಗದಂತೆ, ರಾಜ್ಯ ನೋಡಲ್ ಏಜೆನ್ಸಿಯು,

(ಎ) ಏಕಗವಾಕ್ಷಿ ವ್ಯವಸ್ಥೆಯ ಮೂಲಕ ಅನುಮೋದನೆಗಳು, ಒಪ್ಪಿಗೆ ನೀಡಿಕೆಗಳು, ಲೈಸೆನ್ಸುಗಳು, ಅನುಮತಿಗಳು, ನೋಂದಣಿಗಳು, ಒಪ್ಪಿಗೆಗಳು, ಪ್ರಮಾಣಪತ್ರಗಳು ಮತ್ತು ಇತರ ಸೇವೆಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸುವುದು, ಮಾರ್ಗದರ್ಶಿಸುವುದು, ಸೌಲಭ್ಯ ಕಲ್ಪಿಸುವುದು ಮತ್ತು ಮೇಲ್ವಿಚಾರಣೆ ನಡೆಸತಕ್ಕದ್ದು;

(ಬಿ) ಹೂಡಿಕೆ ಅನುಮೋದನೆ ಸಮಿತಿಯಿಂದ ಸೂಕ್ತ ಅನುಮೋದನೆ ಪಡೆದ ತರುವಾಯ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಅರ್ಜಿಗಳ ಪರಿಷ್ಕರಣೆ ಮತ್ತು ವಿಲೇವಾರಿಯನ್ನು ಖಚಿತಪಡಿಸಲು ಸಂಬಂಧಪಟ್ಟ ಪ್ರಾಧಿಕಾರಗಳ ಮೇಲ್ವಿಚಾರಣೆ ಮಾಡತಕ್ಕದ್ದು;

(ಸಿ) ತ್ವರಿತ ಮಂಜೂರಾತಿ, ನಿರಾಕರಣೆ, ನವೀಕರಣ, ತಿದ್ದುಪಡಿ, ವರ್ಗಾವಣೆ, ರದ್ದಿಯಾತಿ, ಹಿಂದಿರುಗಿಸುವಿಕೆ ಅಥವಾ ಅನುಮೋದನೆಗಳ ವಿಲೇವಾರಿ, ಒಪ್ಪಿಗೆ ನೀಡಿಕೆಗಳು, ಲೈಸೆನ್ಸುಗಳು, ಅನುಮತಿಗಳು, ನೋಂದಣಿಗಳು, ಸಮ್ಮತಿಗಳು, ಪ್ರಮಾಣಪತ್ರಗಳು ಮತ್ತು ಇತರ ಸೇವೆಗಳಿಗಾಗಿ ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳೊಂದಿಗೆ ಸಮನ್ವಯ ಸಾಧಿಸತಕ್ಕದ್ದು;

(ಡಿ) ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ಮುಂದೆ ಉನ್ನತ ಮಟ್ಟದ ಪರ್ಯಾಲೋಚನೆ, ಅಂತರ-ಇಲಾಖೆಯ ನಿರ್ಣಯ, ನೀತಿ ಸ್ಪಷ್ಟೀಕರಣ ಅಥವಾ ನಿಯಂತ್ರಣಾ ಹಸ್ತಕ್ಷೇಪದ ಅಗತ್ಯವಿರುವಲ್ಲಿ ಪ್ರಕರಣಗಳನ್ನು ಹೂಡಿಕೆ ಅನುಮೋದನೆ ಸಮಿತಿ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರದ ಮುಂದೆ ಮಂಡಿಸತಕ್ಕದ್ದು; ಮತ್ತು

(ಇ) ಬಿಡುಗಾಲ ಮಧ್ಯಾವಧಿ (turnaround time)ಯನ್ನು ಕಡಿಮೆಗೊಳಿಸಲು, ಸೇವಾ ವಿತರಣಾ ಕಾಲಮಿತಿಗಳನ್ನು ಸುಧಾರಿಸಲು ಮತ್ತು ನಿಯಂತ್ರಣಾ ಹೊರೆಯನ್ನು ಕಡಿಮೆ ಮಾಡಲು ಅರ್ಜಿಗಳು, ಅನುಮೋದನೆಗಳು, ಒಪ್ಪಿಗೆಗಳು (clearances), ಲೈಸೆನ್ಸುಗಳು, ಅನುಮತಿಗಳು, ನೋಂದಣಿಗಳು, ಒಪ್ಪಿಗೆಗಳು, ಮತ್ತು ಪ್ರಮಾಣಪತ್ರಗಳ ಸ್ಥಿತಿಗತಿ ಮತ್ತು ವೃತ್ತಾಂತವನ್ನು ಮೇಲ್ವಿಚಾರಿಸುವುದು ಮತ್ತು ವಿಶ್ಲೇಷಿಸುವುದು ಹಾಗೂ ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳಿಗೆ ವ್ಯವಹಾರ ಪ್ರಕ್ರಿಯೆಯ ಮರು-ತಾಂತ್ರೀಕರಣ, ಸರಳೀಕರಣ, ಸುವ್ಯವಸ್ಥೀಕರಣ ಮತ್ತು ಡಿಜಿಟೀಕರಣ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಅಥವಾ ಶಿಫಾರಸ್ಸು ಮಾಡತಕ್ಕದ್ದು."

(ii) ಉಪ-ಪ್ರಕರಣ (3) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮಕ್ಕೆ ಸಂಬಂಧಿಸಿದಂತೆ, ಉಪ-ಪ್ರಕರಣ (1)ರ (ಎಚ್) ಖಂಡದಡಿ ನೀಡಲಾದ ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ (clearance) ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಗಳಿಂದ ನೀಡಲಾದ ಅಥವಾ ಮಂಜೂರು ಮಾಡಲಾದ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (MSME) ಸಂದರ್ಭದಲ್ಲಿ ಮೂರು ವರ್ಷಗಳ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳ ಸಂದರ್ಭದಲ್ಲಿ ಐದು ವರ್ಷಗಳ ಪ್ರಾರಂಭಿಕ ಅವಧಿಗೆ ಅಥವಾ ಅವುಗಳ ಅನುಮೋದನೆಯ ದಿನಾಂಕದಿಂದ ವಾಣಿಜ್ಯ ಕಾರ್ಯಾಚರಣೆ ಪ್ರಾರಂಭಗೊಂಡ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ, ಪ್ರಕರಣ 2ರ (iii)ನೇ ಖಂಡದಲ್ಲಿ ಪರಿಭಾಷಿಸಿದಂತೆ ಕೈಗಾರಿಕೆಯನ್ನು ರಚಿಸಲು ಅಥವಾ ಸ್ಥಾಪಿಸುವುದಕ್ಕಾಗಿ ಒಪ್ಪಿಗೆ ನೀಡಿಕೆ ಎಂಬುದಾಗಿ ಭಾವಿಸತಕ್ಕದ್ದು. ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರವನ್ನು ಕೈಗಾರಿಕಾ ಪ್ರದೇಶಗಳಲ್ಲಿ ನೆಲೆಗೊಂಡಿರುವ ಘಟಕಗಳಿಗೆ ಅರ್ಜಿಯನ್ನು ಸ್ವೀಕರಿಸಿದ ಹದಿನೈದು ದಿನಗಳೊಳಗಾಗಿ ಮತ್ತು ಕೈಗಾರಿಕಾ ಪ್ರದೇಶಗಳ ಹೊರಗೆ ನೆಲೆಗೊಂಡಿರುವ ಘಟಕಗಳಿಗೆ ಅರ್ಜಿಯನ್ನು ಸ್ವೀಕರಿಸಿದ ಇಪ್ಪತ್ತು ದಿನಗಳೊಳಗಾಗಿ ರಾಜ್ಯ ನೋಡಲ್ ಏಜೆನ್ಸಿಯು ನೀಡತಕ್ಕದ್ದು. ನಿರ್ದಿಷ್ಟ ಸಮಯದೊಳಗೆ ಅದನ್ನು ಅನುಮೋದಿಸದಿದ್ದರೆ, ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರವನ್ನು ಅನುಮೋದಿಸಲಾಗಿದೆ ಎಂದು ಭಾವಿಸತಕ್ಕದ್ದು.

ವಿವರಣೆ: ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಉಪ-ಪ್ರಕರಣ (3)ರನ್ವಯ ಸ್ಥಾಪಿಸಲಾಗಿದ್ದಲ್ಲಿ, ವಾಣಿಜ್ಯ ಕಾರ್ಯಾಚರಣೆಯನ್ನು ಪ್ರಾರಂಭಿಸುವ ಮೊದಲು ಅರ್ಜಿದಾರನು ಪ್ರಕರಣ 14ರ ಉಪ- ಪ್ರಕರಣ (2) ಮತ್ತು (3)ರನ್ವಯ ಅಗತ್ಯ ಒಪ್ಪಿಗೆ ನೀಡಿಕೆಗಳನ್ನು ಪಡೆಯತಕ್ಕದ್ದು.

(iii) ಉಪ-ಪ್ರಕರಣ (5)ರಲ್ಲಿ, "ಸ್ವೀಕೃತಿ ಪ್ರಮಾಣಪತ್ರದ" ಎಂಬ ಪದಗಳಿಗೆ ಬದಲಾಗಿ "ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರ" ಎಂಬ ಪದಗಳನ್ನು ಸೇರಿಸತಕ್ಕದ್ದು.

(iv) ಉಪ-ಪ್ರಕರಣ (6)ರ ವಿವರಣೆಯ ಬದಲಿಗೆ, ಈ ಮುಂದಿನದನ್ನು ಸೇರಿಸ ತಕ್ಕದ್ದು, ಎಂದರೆ:-

"**ವಿವರಣೆ:** ಉತ್ಪಾದನಾ ಉದ್ಯಮ ಅಥವಾ ಉತ್ಪಾದನಾ ಉದ್ಯಮಕ್ಕೆ ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರದ ವ್ಯಾಪ್ತಿಗೆ ತರಬೇಕಾದ ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆಗಳ ಪಟ್ಟಿಯನ್ನು ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (MSME) ಸಂದರ್ಭದಲ್ಲಿ ಮೂರು ವರ್ಷಗಳ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳ ಸಂದರ್ಭದಲ್ಲಿ ಐದು ವರ್ಷಗಳ ಪ್ರಾರಂಭಿಕ ಅವಧಿಗೆ ಅಥವಾ ಅವುಗಳ ಅನುಮೋದನೆಯ ದಿನಾಂಕದಿಂದ ವಾಣಿಜ್ಯ ಕಾರ್ಯಾಚರಣೆ ಪ್ರಾರಂಭಗೊಂಡ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ, ಇಲಾಖೆಗಳ ಮೂಲಕ ಅನುಮತಿಗಳೆಂದು ಭಾವಿಸತಕ್ಕದ್ದು. ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆಗಳ ಪಟ್ಟಿಯು ಪ್ರಕರಣ 2ರ (iii)ನೇ ಖಂಡದಲ್ಲಿ ಪರಿಭಾಷಿಸಲಾದ ಅನುಮತಿಗಳನ್ನು ಒಳಗೊಂಡಿರತಕ್ಕದ್ದು."

6. ಪ್ರಕರಣ 13-ಎ, 13-ಬಿ ಮತ್ತು 13-ಸಿ ಹೊಸ ಪ್ರಕರಣಗಳ ಸೇರ್ಪಡೆ.- ಮೂಲ ಅಧಿನಿಯಮದ 13ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**13-ಎ. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ**.- (1) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ರಾಜ್ಯ ನೋಡಲ್ ಏಜೆನ್ಸಿಯ ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರತಕ್ಕದ್ದು.

(2) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ರಾಜ್ಯ ನೋಡಲ್ ಏಜೆನ್ಸಿಯ ಪರವಾಗಿ, ಈ ಅಧಿನಿಯಮದ ಮೂಲಕ ರಾಜ್ಯ ನೋಡಲ್ ಏಜೆನ್ಸಿಯಲ್ಲಿ ನಿಹಿತವಾಗಿರುವ ಎಲ್ಲಾ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಈ ಅಧಿನಿಯಮದಡಿಯಲ್ಲಿ ಅರ್ಜಿಗಳ ತ್ವರಿತ ನಿರ್ವಹಣೆ ಮತ್ತು ವಿಲೇವಾರಿಗೆ ಅಗತ್ಯವಿರುವ ನಿರ್ದೇಶನಗಳನ್ನು ರಾಜ್ಯ ನೋಡಲ್ ಏಜೆನ್ಸಿಯ ಅಧಿಕಾರಿಗಳು ಮತ್ತು ಸಮನ್ವಯ ಸಮಿತಿಯ ಸದಸ್ಯರಿಗೆ ನೀಡಬಹುದು.

(4) ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

13-ಬಿ. ಸಮನ್ವಯ ಸಮಿತಿ.- (1) ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದಂತೆ ಅಪರ ನಿರ್ದೇಶಕರು ಅಥವಾ ಜಂಟಿ ನಿರ್ದೇಶಕರ ಅಥವಾ ತತ್ಸಮಾನ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಗಳನ್ನು ಒಳಗೊಂಡಿರುವ ಸಮನ್ವಯ ಸಮಿತಿಯು ರಾಜ್ಯ ನೋಡಲ್ ಏಜೆನ್ಸಿಯನ್ನು ಸಮರ್ಥಿಸತಕ್ಕದ್ದು.

(2) ರಾಜ್ಯ ನೋಡಲ್ ಏಜೆನ್ಸಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯು ಸಮನ್ವಯ ಸಮಿತಿಯ ಅಧ್ಯಕ್ಷನಾಗಿರತಕ್ಕದ್ದು.

(3) ಸಮನ್ವಯ ಸಮಿತಿಯ ಸದಸ್ಯರು ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದಂತೆ ತಮ್ಮ ಸಂಬಂಧಿತ ಪ್ರಾಧಿಕಾರ ಅಥವಾ ಪ್ರಾಧಿಕಾರಗಳಿಗೆ ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸತಕ್ಕದ್ದು ಮತ್ತು ಈ ಅಧಿನಿಯಮದಡಿಯಲ್ಲಿ ಅರ್ಜಿಗಳು, ಅನುಮೋದನೆಗಳು, ಒಪ್ಪಿಗೆಗಳು, ಲೈಸೆನ್ಸುಗಳು, ಅನುಮತಿಗಳು, ನೋಂದಣಿಗಳು, ಸಮ್ಮತಿಗಳು, ಪ್ರಮಾಣಪತ್ರಗಳು ಮತ್ತು ಇತರ ಸೇವೆಗಳ ಸಮನ್ವಯ, ಸಕಾಲಿಕ ನಿರ್ವಹಣೆ ಮತ್ತು ವಿಲೇವಾರಿಗೆ ಅನುಕೂಲವಾಗುವಂತೆ ಜವಾಬ್ದಾರರಾಗಿರತಕ್ಕದ್ದು.

(4) ಸಮನ್ವಯ ಸಮಿತಿಯು ರಾಜ್ಯ ನೋಡಲ್ ಏಜೆನ್ಸಿಯನ್ನು ಈ ಮುಂದಿನವುಗಳಿಗಾಗಿ ಸಮರ್ಥಿಸತಕ್ಕದ್ದು, ಎಂದರೆ:-

(ಎ) ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದಂತೆ ಪ್ರಾಧಿಕಾರ ಅಥವಾ ಪ್ರಾಧಿಕಾರಗಳೊಂದಿಗೆ ಸಮನ್ವಯ ಸಾಧಿಸುವುದು;

(ಬಿ) ನಿರ್ದಿಷ್ಟ ಕಾಲಮಿತಿಯಲ್ಲಿ ಅನುಪಾಲನೆಯನ್ನು ಮೇಲ್ವಿಚಾರಣೆ ಮಾಡುವುದು;

(ಸಿ) ಹೂಡಿಕೆ ಪ್ರಸ್ತಾವನೆಗಳ ಮೇಲೆ ಪರಿಣಾಮ ಬೀರುವ ಅಂತರ-ಇಲಾಖೆಯ ಸಮಸ್ಯೆಗಳನ್ನು ಪರಿಹರಿಸುವುದು;

(ಡಿ) ಕೇಂದ್ರ ತಪಾಸಣೆ ವ್ಯವಸ್ಥೆಯ ಮೂಲಕ ತಪಾಸಣೆಗಳನ್ನು ಸಮನ್ವಯಗೊಳಿಸುವುದು;

(ಇ) ವಿಳಂಬಿತ ಅರ್ಜಿಗಳನ್ನು ತೀಕ್ಷ್ಣಗೊಳಿಸುವುದು ಮತ್ತು ಪರಿಹರಿಸುವುದು; ಮತ್ತು

(ಎಫ್) ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಥವಾ ನಿಯೋಜಿಸಬಹುದಾದ ಅಂಥ ಇತರ ಪ್ರಕಾರ್ಯಗಳು.

(5) ರಾಜ್ಯ ನೋಡಲ್ ಏಜೆನ್ಸಿಯ ವ್ಯವಸ್ಥಾಪಕ ನಿರ್ದೇಶಕರು ಸಮನ್ವಯ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(6) ಸಮನ್ವಯ ಸಮಿತಿಯು ನಿಯಮಿಸಬಹುದಾದ ಅಂಥ ಮಧ್ಯಂತರಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

13-ಸಿ. ಏಕ ಗವಾಕ್ಷಿ ವ್ಯವಸ್ಥೆಯೊಂದಿಗೆ ಕಡ್ಡಾಯ ಸಂಯೋಜನೆ ಮತ್ತು ಒಂದು ಬಾರಿ ಮಾತ್ರ ಮಾಹಿತಿ ಸಲ್ಲಿಕೆ.- (1) ಕೈಗಾರಿಕೆ ಅಥವಾ ಉದ್ಯಮದ ಸ್ಥಾಪನೆ, ಕಾರ್ಯಾಚರಣೆ ಅಥವಾ ವಿಸ್ತರಣೆಗೆ ಅಗತ್ಯವಿರುವ ಯಾವುದೇ ಅನುಮೋದನೆ, ಲೈಸೆನ್ಸು, ನೋಂದಣಿ, ಅನುಮತಿ, ಸಮ್ಮತಿ, ಒಪ್ಪಿಗೆ, ಪ್ರಮಾಣಪತ್ರ, ಪ್ರೋತ್ಸಾಹಕ, ನವೀಕರಣ ಅಥವಾ ಇತರ ಸೇವೆಯನ್ನು ಒಳಗೊಂಡಂತೆ ಯಾವುದೇ ವ್ಯವಹಾರ-ಸಂಬಂಧಿತ ಸೇವೆಯನ್ನು ಒದಗಿಸುವ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಪ್ರತಿಯೊಂದು ಇಲಾಖೆ, ಕಚೇರಿ, ಪ್ರಾಧಿಕಾರ, ಮಂಡಳಿ, ನಿಗಮ, ಸ್ಥಳೀಯ ಪ್ರಾಧಿಕಾರ, ಶಾಸನಬದ್ಧ ಸಂಸ್ಥೆ, ಏಜೆನ್ಸಿ ಅಥವಾ. ಇತರ ಘಟಕಗಳು, ಅವುಗಳ ಡಿಜಿಟಲ್ ವ್ಯವಸ್ಥೆಗಳು, ದತ್ತಸಂಚಯಗಳು (database) ಮತ್ತು ಆನ್‌ಲೈನ್ ಸೇವಾ ವಿತರಣಾ ವೇದಿಕೆಗಳನ್ನು ಏಕ ಗವಾಕ್ಷಿ ವ್ಯವಸ್ಥೆಯೊಂದಿಗೆ ಸಂಯೋಜಿಸತಕ್ಕದ್ದು.

(2) ಉಪ-ಪ್ರಕರಣ (1)ರ ಉದ್ದೇಶಗಳಿಗಾಗಿ, ಪ್ರತಿಯೊಂದು ಇಲಾಖೆ, ಕಚೇರಿ, ಪ್ರಾಧಿಕಾರ, ನಿಕಾಯ ಅಥವಾ ಏಜೆನ್ಸಿಯು ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ದತ್ತಾಂಶ ಅಂತರ-ನಿರ್ವಹಣಾ (inter-operability) ಮಾನದಂಡಗಳು, ಅಪ್ಲಿಕೇಶನ್ ಪ್ರೋಗ್ರಾಮಿಂಗ್ ಇಂಟರ್ಫೇಸ್‌ಗಳು, ದತ್ತಾಂಶ ವಿನಿಮಯ ಪ್ರೋಟೋಕಾಲ್‌ಗಳು, ಡಿಜಿಟಲ್ ದೃಢೀಕರಣ ಕಾರ್ಯವ್ಯವಸ್ಥೆಗಳು ಮತ್ತು ಇತರ ತಂತ್ರಜ್ಞಾನ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸತಕ್ಕದ್ದು, ಅಳವಡಿಸಿಕೊಳ್ಳತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(3) ಏಕ ಗವಾಕ್ಷಿ ವ್ಯವಸ್ಥೆಯ ಮೂಲಕ ಸಲ್ಲಿಸಲಾದ ಅರ್ಜಿಗಳು, ಸಾಧ್ಯವಾದಷ್ಟು ಮಟ್ಟಿಗೆ, ದತ್ತಾಂಶ ರಕ್ಷಣೆ, ಖಾಸಗಿತನ, ಗೌಪ್ಯತೆ, ಒಪ್ಪಿಗೆ, ಭದ್ರತೆ ಮತ್ತು ಪ್ರವೇಶ ನಿಯಂತ್ರಣಕ್ಕೆ ಸಂಬಂಧಿಸಿದ ಅನ್ವಯವಾಗುವ ಕಾನೂನುಗಳಿಗೆ ಒಳಪಟ್ಟು, ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರ ಅಥವಾ ಪ್ರಾಧಿಕಾರಗಳಲ್ಲಿ ಈಗಾಗಲೇ ಲಭ್ಯವಿರುವ ಮಾಹಿತಿ ಮತ್ತು ದಸ್ತಾವೇಜುಗಳೊಂದಿಗೆ ಸ್ವಯಂ-ಭರಿಸಿಕೊಳ್ಳತಕ್ಕದ್ದು.

(4) ಯಾರೇ ಅರ್ಜಿದಾರರು ರಾಜ್ಯ ಸರ್ಕಾರದ ಯಾವುದೇ ಇಲಾಖೆ, ಕಚೇರಿ, ಪ್ರಾಧಿಕಾರ, ನಿಕಾಯ ಅಥವಾ ಏಜೆನ್ಸಿಯೊಂದಿಗೆ ಈಗಾಗಲೇ ಸಲ್ಲಿಸಲಾದ, ಸಂರಚಿಸಲಾದ, ನೀಡಲಾದ ಅಥವಾ ಅನ್ಯಥಾ ಲಭ್ಯವಿರುವ ಯಾವುದೇ ಮಾಹಿತಿ, ದಾಖಲೆ, ಪ್ರಮಾಣಪತ್ರ, ಅನುಮೋದನೆ, ನೋಂದಣಿ, ಪರವಾನಗಿ, ದಾಖಲೆ ಅಥವಾ ವಿವರಗಳನ್ನು ಯಾವುದೇ ಮಾಹಿತಿ, ದಾಖಲೆ, ಪ್ರಮಾಣಪತ್ರ, ಅನುಮೋದನೆ, ನೋಂದಣಿ, ಲೈಸೆನ್ಸು, ದಸ್ತಾವೇಜು ಅಥವಾ ಇತರ ವಿವರಗಳನ್ನು ಒದಗಿಸುವ ಅಥವಾ ಅಪ್‌ಲೋಡ್ ಮಾಡುವ ಅಗತ್ಯವಿರತಕ್ಕದ್ದಲ್ಲ:

ಪರಂತು ವಿತರಿಸುವ ಪ್ರಾಧಿಕಾರದ ದಾಖಲೆಗಳಲ್ಲಿ ಯಾವುದೇ ಅಂಥ ಮಾಹಿತಿ, ದಾಖಲೆ, ಪ್ರಮಾಣಪತ್ರ, ಅನುಮೋದನೆ, ನೋಂದಣಿ, ಲೈಸೆನ್ಸು, ದಸ್ತಾವೇಜು ಅಥವಾ ಇತರ ವಿವರಗಳನ್ನು ಪರಿಶೀಲಿಸುವ, ದೃಢೀಕರಿಸುವ, ಸಿಂಧುಗೊಳಿಸುವ, ನವೀಕರಿಸುವ, ಇಂದೀಕರಿಸುವ ಅಥವಾ

ಪ್ರಸ್ತುತ ಸ್ಥಿತಿಗತಿ, ಸಿಂಧುತ್ವ ಅಥವಾ ಸರಿಯಾಗಿರುವುದನ್ನು ಅವಲೋಕಿಸುವ ಅಗತ್ಯವಿದ್ದಲ್ಲಿ, ಸಂಬಂಧಪಟ್ಟ ಇಲಾಖೆ, ಕಚೇರಿ, ಪ್ರಾಧಿಕಾರ, ನಿಕಾಯ ಅಥವಾ ಏಜೆನ್ಸಿಯು ಅದನ್ನು ವಿತರಿಸುವ ಪ್ರಾಧಿಕಾರ, ಮೂಲ ದತ್ತಸಂಚಯ, ಸರ್ಕಾರಿ ಭಂಡಾರ, ಏಕ ಗವಾಕ್ಷಿ ವ್ಯವಸ್ಥೆ ಅಥವಾ ಯಾವುದೇ ಇತರ ಅಂತರ-ನಿರ್ವಹಣಾ ಸರ್ಕಾರಿ ವ್ಯವಸ್ಥೆಯಿಂದ ವಿದ್ಯುನ್ಮಾನವಾಗಿ ಪಡೆಯತಕ್ಕದ್ದು ಅಥವಾ ಪರಿಶೀಲಿಸತಕ್ಕದ್ದು ಮತ್ತು ಅರ್ಜಿದಾರರು ಅದನ್ನು ಮತ್ತೆ ಒದಗಿಸುವ ಅಥವಾ ಅಪ್‌ಲೋಡ್ ಮಾಡುವ ಅಗತ್ಯವಿರತಕ್ಕದ್ದಲ್ಲ.

ಮತ್ತು ಪರಂತು ಅನುಸೂಚಿ-Iರಲ್ಲಿ ನಿರ್ದಿಷ್ಟಪಡಿಸಿದಂತೆ ವಿತರಿಸುವ ಪ್ರಾಧಿಕಾರ ಅಥವಾ ಪ್ರಾಧಿಕಾರಗಳ ದಾಖಲೆಗಳಲ್ಲಿ ಸಿಂಧುವೆಂದು, ಅಸ್ತಿತ್ವದಲ್ಲಿರುವುದೆಂದು ಮತ್ತು ಇಂದೀಕರಿಸಲಾಗಿದೆಯೆಂದು ಅರ್ಜಿದಾರರು ನಂಬುವ ಯಾವುದೇ ಅನುಮೋದನೆ, ಲೈಸೆನ್ಸು, ನೋಂದಣಿ, ಪ್ರಮಾಣಪತ್ರ, ಒಪ್ಪಿಗೆ, ಅನುಮತಿ ಅಥವಾ ಇತರ ದಸ್ತಾವೇಜುಗಳನ್ನು ಖಾತ್ರಿಪಡಿಸಿಕೊಳ್ಳಲು ಅರ್ಜಿದಾರರು ಜವಾಬ್ದಾರರಾಗಿರತಕ್ಕದ್ದು.

(5) ರಾಜ್ಯ ಸರ್ಕಾರವು ಈ ಪ್ರಕರಣದಡಿಯಲ್ಲಿ ಸಂಯೋಜನೆ, ದತ್ತಾಂಶ ಹಂಚಿಕೆ, ದೃಢೀಕರಣ, ಲೆಕ್ಕಪರಿಶೋಧನೆ, ಭದ್ರತೆ ಮತ್ತು ಅನುಪಾಲನೆಗಾಗಿನ ವಿಧಾನ, ಮಾನದಂಡಗಳು, ಸುರಕ್ಷಾಕ್ರಮಗಳು, ಜವಾಬ್ದಾರಿಗಳು ಮತ್ತು ಕಾರ್ಯವಿಧಾನಗಳನ್ನು ನಿಯಮಿಸಬಹುದು."

7. ಪ್ರಕರಣ 14ರ ತಿದ್ದುಪಡಿ.- ಮೂಲ ಅಧಿನಿಯಮದ 14ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿನ "ಸ್ವೀಕೃತಿ ಪ್ರಮಾಣ ಪತ್ರವು" ಎಂಬ ಪದಗಳು ಬರುವ ಕಡೆಗಳಲ್ಲಿ ಅದರ ಬದಲಾಗಿ "ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. ಪ್ರಕರಣ 16ರ ಪ್ರತಿಯೋಜನೆ.- ಮೂಲ ಅಧಿನಿಯಮದ 16ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**16. ತಪಾಸಣೆ.-** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರವು ಸಿಂಧುವಾಗಿರುವ ಅವಧಿಯಲ್ಲಿ, ತಪಾಸಣೆಯು ಅಗತ್ಯವಿರುವ ಸಂದರ್ಭಗಳನ್ನು ಹೊರತುಪಡಿಸಿ, ಯಾವುದೇ ತಪಾಸಣೆಯನ್ನು ನಡೆಸತಕ್ಕದ್ದಲ್ಲ. ಅಂಥ ಸಂದರ್ಭಗಳಲ್ಲಿ, ಸಂಬಂಧಪಟ್ಟ ಇಲಾಖೆಗಳ ಇಲಾಖಾ ಮುಖ್ಯಸ್ಥರ ಪೂರ್ವಾನುಮೋದನೆಯೊಂದಿಗೆ ಮತ್ತು ಸಂಬಂಧಪಟ್ಟ ನೋಡಲ್ ಏಜೆನ್ಸಿಯೊಂದಿಗೆ ಸಮಾಲೋಚಿಸಿ, ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಮಾರ್ಗಸೂಚಿಗಳಿಗೆ ಒಳಪಟ್ಟು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮಾತ್ರ ತಪಾಸಣೆಯನ್ನು ನಡೆಸತಕ್ಕದ್ದು."

9. ಪ್ರಕರಣ 19ರ ತಿದ್ದುಪಡಿ.- ಮೂಲ ಅಧಿನಿಯಮದ 19ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿನ "ಸ್ವೀಕೃತಿ ಪ್ರಮಾಣ ಪತ್ರಕ್ಕಾಗಿ" ಎಂಬ ಪದಗಳ ಬದಲಾಗಿ "ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರಕ್ಕಾಗಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. ಹೊಸ ಪ್ರಕರಣ 20-ಎ ಸೇರ್ಪಡೆ.- ಮೂಲ ಅಧಿನಿಯಮದ 20ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**20-ಎ. ಅಧ್ಯಾರೋಹಿ ಪರಿಣಾಮ.-** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮ ಮತ್ತು ಅದರಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯದ ಯಾವುದೇ ಕಾನೂನಿನಲ್ಲಿ ಇದಕ್ಕೆ ವ್ಯತಿರಿಕ್ತವಾಗಿ ಏನೇ ಒಳಗೊಂಡಿದ್ದರೂ, ಸೇವಾ ವಿತರಣೆ ಮತ್ತು ಸೌಲಭ್ಯ ಕಾರ್ಯವಿಧಾನದ ಮಟ್ಟಿಗೆ ಈ ಅಧಿನಿಯಮದ ಹಾಗೂ ಇದರ ಅಡಿಯಲ್ಲಿ ರಚಿಸಲಾದ ನಿಯಮಗಳ ಉಪಬಂಧಗಳು ಅಧ್ಯಾರೋಹಿ ಪರಿಣಾಮವನ್ನು ಹೊಂದಿರತಕ್ಕದ್ದು."

11. ಹೊಸ ಅನುಸೂಚಿ-Iರ ಸೇರ್ಪಡೆ.- ಮೂಲ ಅಧಿನಿಯಮದಲ್ಲಿ, 23ನೇ ಪ್ರಕರಣದ ತರುವಾಯ, ಈ ಮುಂದಿನ ಅನುಸೂಚಿ-Iನ್ನು ಸೇರಿಸತಕ್ಕದ್ದು, ಎಂದರೆ:-

"**ಅನುಸೂಚಿ -I**

(ಪ್ರಕರಣ 13-ಬಿ ನೋಡಿ)

ಸಮನ್ವಯ ಸಮಿತಿಯ ಸಂರಚನೆ

ಸಮನ್ವಯ ಸಮಿತಿಯು ಈ ಕೆಳಗಿನ ಇಲಾಖೆಗಳು ಅಥವಾ ಪ್ರಾಧಿಕಾರದ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

1. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ.

2. ಕಂದಾಯ ಇಲಾಖೆ.

3. ಇಂಧನ ಇಲಾಖೆ.

4. ಪೌರಾಡಳಿತ ಇಲಾಖೆ.

5. ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ.

6. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ.

7. ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ಜವಳಿ ಮತ್ತು ಗಣಿ ಇಲಾಖೆ.

8. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ.

9. ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ.

10. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ.

11. ಕಾರ್ಮಿಕ ಇಲಾಖೆ.

12. ಕಾರ್ಖಾನೆಗಳು, ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಆರೋಗ್ಯ ಇಲಾಖೆ.

13. ಗಣಿ ಮತ್ತು ಭೂವಿಜ್ಞಾನ ಇಲಾಖೆ.

14. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ.

15. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಥವಾ ಯೋಜನಾ ಪ್ರದೇಶದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಅಂಥ ಇತರ ನೀರು ಸರಬರಾಜು ಮತ್ತು ಒಳಚರಂಡಿ ಪ್ರಾಧಿಕಾರ.

ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಾಮನಿರ್ದೇಶಿಸಬಹುದಾದ ಯಾವುದೇ ಇತರ ಇಲಾಖೆ, ಪ್ರಾಧಿಕಾರ, ಮಂಡಳಿ, ನಿಗಮ ಅಥವಾ ಏಜೆನ್ಸಿ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(i) ಪರಿಭಾಷೆಯ ಖಂಡದದಡಿಯಲ್ಲಿ ಕೆಲವು ಪರಿಭಾಷೆಗಳನ್ನು ಸೇರಿಸಲು ಮತ್ತು ಮಾರ್ಪಡಿಸಲು ;

(ii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರನ್ನು ಸಹ-ಅಧ್ಯಕ್ಷರಾಗಿ ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಗೆ ಸೇರಿಸಲು ಹಾಗೂ ಅದರ ಸಭೆಗಳ ಕಾರ್ಯವಿಧಾನವನ್ನು ನಿಯಮಿಸಲು ;

(iii) ರಾಜ್ಯ ನೋಡಲ್ ಏಜೆನ್ಸಿ ಮತ್ತು ಅದರ ಪ್ರಕಾರ್ಯಗಳ ಸಂರಚನೆಯನ್ನು ಉಪಬಂಧಿಸಲು ;

(iv) "ಸ್ವೀಕೃತಿ ಪ್ರಮಾಣಪತ್ರ" ಪದವನ್ನು "ಅಫಿಡವಿಟ್ ಆಧಾರಿತ ಒಪ್ಪಿಗೆ ನೀಡಿಕೆ ಪ್ರಮಾಣಪತ್ರ"ವೆಂದು ಬದಲಾಯಿಸಲು ;

(v) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಕಾನೂನುಗಳ ಮೇಲೆ ಅಧಿನಿಯಮವು ಅಧ್ಯಾರೋಹಿ ಪರಿಣಾಮ ಬೀರಲು,

-ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 45) ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಈ ಹಂತದಲ್ಲಿ ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ 3:	ಉಪ-ಖಂಡ (2-ಎ), ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಗೆ ಅದರ ವ್ಯವಹರಣೆಗಳನ್ನು ನಡೆಸುವ ಕಾರ್ಯವಿಧಾನದ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 5:	ಉಪ-ಖಂಡ (2-ಜಿ), ರಾಜ್ಯ ನೋಡಲ್ ಏಜೆನ್ಸಿಯು ಏಕ ಗವಾಕ್ಷಿ ವ್ಯವಸ್ಥೆಯ ಪರಿಣಾಮಕಾರಿ ಅನುಷ್ಠಾನ, ಕಾರ್ಯಾಚರಣೆ ಮತ್ತು ಆಡಳಿತ ನಿರ್ವಹಣೆಗಾಗಿ ಮಾರ್ಗಸೂಚಿಗಳು ಮತ್ತು ಪ್ರಮಾಣಿತ ಕಾರ್ಯಾಚರಣೆಯ ಕಾರ್ಯವಿಧಾನಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.
ಖಂಡ 6:	ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಮತ್ತು ಸಮನ್ವಯ ಸಮಿತಿಯ ಪ್ರಕಾರ್ಯಗಳ ಹಾಗೂ ಸಂಯೋಜನೆ, ದತ್ತಾಂಶ ಹಂಚಿಕೆ, ದೃಢೀಕರಣ, ಲೆಕ್ಕ ಪರಿಶೋಧನೆ, ಭದ್ರತೆ ಮತ್ತು ಅನುಪಾಲನೆಗಾಗಿನ ವಿಧಾನ, ಮಾನದಂಡಗಳು, ಸುರಕ್ಷಾಕ್ರಮಗಳು, ಜವಾಬ್ದಾರಿಗಳು ಮತ್ತು ಕಾರ್ಯವಿಧಾನಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಎಂ.ಬಿ. ಪಾಟೀಲ್
ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿ

ಎಂ.ಕೆ. ವಿಶಾಲಾಕ್ಷಿ
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ 2002

(2003ರ ಕರ್ನಾಟಕ ಅಧಿನಿಯಮ 45)ರ ಉದ್ಧೃತ ಭಾಗ

XX **XX** **XX**

2. ಪರಿಭಾಷೆಗಳು :- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

XX **XX** **XX**

(iಎ) ``ಅನ್ವಯವಾಗುವ ಅಧಿನಿಯಮಗಳು'' ಎಂದರೆ, ಕಾರ್ಖಾನೆಗಳ ಅಧಿನಿಯಮ, 1948, ಬಾಯ್ಲರುಗಳ ಅಧಿನಿಯಮ, 1923, ಕರಾರು ಕಾರ್ಮಿಕರ (ವಿನಿಯಮನ ಮತ್ತು ರದ್ದಿಯಾತಿ) ಅಧಿನಿಯಮ, 1970, ನೌಕರರ ರಾಜ್ಯ ವಿಮಾ ಅಧಿನಿಯಮ, 1948, ಕನಿಷ್ಠ ಮಜೂರಿ ಅಧಿನಿಯಮ, 1948, ಬೋನಸ್ ಸಂದಾಯ ಅಧಿನಿಯಮ, 1956, ಮಜೂರಿ ಸಂದಾಯ ಅಧಿನಿಯಮ, 1936, ಪ್ರಸೂತಿ ಸೌಲಭ್ಯ ಅಧಿನಿಯಮ, 1961, ಉಪದಾನ ಅಧಿನಿಯಮ, 1972, ಸಮಾನ ಪರಿಶ್ರಮ ಧನ ಅಧಿನಿಯಮ, 1976 ಮತ್ತು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961. ಕಾನೂನು ಮಾಪನ ಅಧಿನಿಯಮ, 2009 (2010ರ ಕೇಂದ್ರ ಅಧಿನಿಯಮ 1) ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18), ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42), ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 76), ಕರ್ನಾಟಕ ಅರಣ್ಯ ನಿಯಮಗಳು, 1969, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34), ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನೀತಿಗಳು.

(ii) ``ಪ್ರಾಧಿಕಾರ'' ಎಂಬುದು, ರಾಜ್ಯ ಸರ್ಕಾರವು ಸ್ಥಾಪಿಸಿದ ಮತ್ತು ಒಪ್ಪಿಗೆಗಳನ್ನು ಮಂಜರುಮಾಡುವ ಅಥವಾ ನೀಡುವ ಅಧಿಕಾರಗಳು ಅಥವಾ ಹೊಣೆಗಾರಿಕೆಯನ್ನು ವಹಿಸಲಾದ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಶಾಸನಬದ್ಧ ಮಂಡಳಿ, ನಿಗಮ ಅಥವಾ ಇತರ ಪ್ರಾಧಿಕಾರವನ್ನು ಒಳಗೊಳ್ಳುತ್ತದೆ;

XX **XX** **XX**

11ಎ. ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿ.- (1) ಸರ್ಕಾರವು ಈ ಮುಂದಿನವರನ್ನು ಒಳಗೊಂಡ ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯನ್ನು ರಚಿಸಬಹುದು, ಎಂದರೆ:-

(ಎ) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು -ಅಧ್ಯಕ್ಷರು

(ಬಿ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ - ಸದಸ್ಯರು

(ಸಿ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ - ಸದಸ್ಯರು

(ಡಿ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ - ಸದಸ್ಯರು

(ಇ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇಂಧನ ಇಲಾಖೆ - ಸದಸ್ಯರು

(ಎಫ್) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ - ಸದಸ್ಯರು

(ಜಿ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ -ಸದಸ್ಯರು

(ಎಚ್) ಸರ್ಕಾರದ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ, ಇಲಾಖೆ - ಸದಸ್ಯರು

(ಐ) ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ (ಸಣ್ಣ ಪ್ರಮಾಣದ

ಕೈಗಾರಿಕೆಗಳು, ಜವಳಿ ಮತ್ತು ಗಣಿ) - ಸದಸ್ಯರು

(ಜೆ) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೃಷಿ ಇಲಾಖೆ -ಸದಸ್ಯರು

(ಕೆ) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ - ಸದಸ್ಯರು

(ಎಲ್) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ - ಸದಸ್ಯರು

(ಎಮ್) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ - ಸದಸ್ಯರು

(ಎನ್) ಪೊಲೀಸು ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು - ಸದಸ್ಯರು

(ಒ) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಹಣಾ ಸದಸ್ಯರು, ಕರ್ನಾಟಕ ಕೈಗಾರಿಕಾ

ಪ್ರದೇಶ ಅಭಿವೃದ್ಧಿ ಮಂಡಳಿ, ಬೆಂಗಳೂರು - ಸದಸ್ಯರು

(ಪಿ) ಕೈಗಾರಿಕಾ ಅಭಿವೃದ್ಧಿ ಆಯುಕ್ತರು ಮತ್ತು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶಕರು - ಸದಸ್ಯ ಕಾರ್ಯದರ್ಶಿ

ಟಿಪ್ಪಣಿ:- ಈ ಪ್ರಕರಣದ ಉದ್ದೇಶಕ್ಕಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಎಂದರೆ, ``ಕೈಗಾರಿಕೆಗಳು (ಸೌಲಭ್ಯ)'' ವಿಷಯದ ಪ್ರಭಾರವನ್ನು ಹೊಂದಿರುವ ಸರ್ಕಾರದ ಕಾರ್ಯದರ್ಶಿಗಳು ಅಥವಾ ಪ್ರಧಾನ ಕಾರ್ಯದರ್ಶಿಗಳು ಅಥವಾ ಅಪರ ಮುಖ್ಯ ಕಾರ್ಯದರ್ಶಿಗಳು.

(2) ಸಮಿತಿಯು, ಅವಶ್ಯವಿದ್ದಲ್ಲಿ ಅಂಥ ಪರಿಣತಿ ಅಥವಾ ಜ್ಞಾನವನ್ನುಳ್ಳ ವ್ಯಕ್ತಿಯನ್ನು ಸಹ-ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು.

(3) ರಾಜ್ಯ ಮಟ್ಟದ ಪ್ರಾಧಿಕೃತ ಸಮಿತಿಯ ಪ್ರಕಾರ್ಯಗಳು ಈ ಮುಂದಿನಂತೆ ಇರತಕ್ಕದ್ದು,-

(i) ರಾಜ್ಯ ಮಟ್ಟದ ಏಕಗವಾಕ್ಷಿ-ಒಪ್ಪಿಗೆ ನೀಡಿಕೆ ಸಮಿತಿ ಮತ್ತು ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯು ಒಪ್ಪಿಗೆ ನೀಡಿದ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು;

(ii) ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.]1

XX XX XX

12. ನೋಡಲ್ ಏಜೆನ್ಸಿಗಳ ನೇಮಕ.- ರಾಜ್ಯ ಸರ್ಕಾರವು, ಹೂಡಿಕೆಗೆ ಉತ್ತೇಜನ ನೀಡುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಮತ್ತು ರಾಜ್ಯದಲ್ಲಿ ಕೈಗಾರಿಕಾ ಉದ್ಯಮಗಳನ್ನು ಸ್ಥಾಪಿಸಲು ಉದ್ಯಮದಾರರಿಗೆ ಅಗತ್ಯ ಮಾರ್ಗದರ್ಶನ ಮತ್ತು ನೆರವನ್ನು ನೀಡಲು, ಅಧಿಸೂಚನೆಯ ಮೂಲಕ, ರಾಜ್ಯಮಟ್ಟದಲ್ಲಿ, ಕರ್ನಾಟಕ ಉದ್ಯೋಗ ಮಿತ್ರವನ್ನು `ನೋಡಲ್ ಏಜೆನ್ಸಿ' ಎಂಬುದಾಗಿ ಮತ್ತು ಜಿಲ್ಲಾಮಟ್ಟದಲ್ಲಿ, ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು `ಜಿಲ್ಲಾ ನೋಡಲ್ ಏಜೆನ್ಸಿ' ಎಂಬುದಾಗಿ ನೇಮಕ ಮಾಡಬಹುದು.

13. ನೋಡಲ್ ಏಜೆನ್ಸಿಗಳ ಪ್ರಕಾರ್ಯಗಳು:- (1) ಜಿಲ್ಲಾ ಮಟ್ಟದಲ್ಲಿ ನೋಡಲ್ ಏಜೆನ್ಸಿಯ ಪ್ರಕಾರ್ಯಗಳು ಇತರೆ ವಿಷಯಗಳೊಂದಿಗೆ ಈ ಮುಂದಿನವುಗಳನ್ನು ಒಳಗೊಳ್ಳತಕ್ಕದ್ದು.-

(ಎ) ಹೂಡಿಕೆಗೆ ಉತ್ತೇಜನ ನೀಡುವ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವುದು.

(ಬಿ) ಕೈಗಾರಿಕಾ ಪ್ರಗತಿಗಾಗಿ ಕಾರ್ಯನೀತಿ ರೂಪಿಸುವಲ್ಲಿ ಅಗತ್ಯ ನೆರವನ್ನು ನೀಡುವುದು;

(ಸಿ) ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ಯಮದಾರರಿಗೆ ಮಾರ್ಗದರ್ಶನ ಮತ್ತು ನೆರವು ನೀಡುವುದು;

(ಡಿ) ಉದ್ಯಮದಾರರಿಗೆ ಸಂಯೋಜಿತ ಅರ್ಜಿನಮೂನೆಯನ್ನು ನೀಡುವುದು ಮತ್ತು ಅವರಿಂದ ನಮೂನೆಗಳನ್ನು ಸ್ವೀಕರಿಸುವುದು ಮತ್ತು ಗೊತ್ತುಪಡಿಸಿದ ಸಮಯದೊಳಗೆ ಇಲಾಖೆಗಳು ಮತ್ತು ಪ್ರಾಧಿಕಾರಗಳಿಂದ ಅಗತ್ಯ ಒಪ್ಪಿಗೆ ನೀಡಿಕೆಗಳನ್ನು ಸಹ ವ್ಯವಸ್ಥೆಗೊಳಿಸುವುದು.

(ಇ) ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಗೆ, ರಾಜ್ಯ ಮಟ್ಟದ ಏಕಗವಾಕ್ಷಿ - ಒಪ್ಪಿಗೆ ನೀಡಿಕೆ ಸಮಿತಿಗೆ ಮತ್ತು ಜಿಲ್ಲಾಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಲಿಪಿಕ ಸಿಬ್ಬಂದಿಯ ಸೌಲಭ್ಯವನ್ನು ಒದಗಿಸುವುದು;

(ಎಫ್) ಪರಿಸರ ಸ್ನೇಹಪರ ಮತ್ತು ಸುಸ್ಪಷ್ಟ ತಂತ್ರಜ್ಞಾನ ಮತ್ತು ಉತ್ಪಾದನಾ ಪದ್ಧತಿಗಳನ್ನು ವೃದ್ಧಿಗೊಳಿಸುವುದು;

(ಜಿ) ರಾಜ್ಯಸರ್ಕಾರವು ಅದಕ್ಕೆ ವಹಿಸಬಹುದಾದ ಯಾವುದೇ ಇತರೆ ಪ್ರಕಾರ್ಯಗಳನ್ನು ನಿರ್ವಹಿಸುವುದು.

(ಎಚ್) ಉತ್ಪಾದನಾ ಕೈಗಾರಿಕೆಗಳು ಅಥವಾ ಉದ್ಯಮಗಳಿಂದ ಸಂಯೋಜಿತ ಅರ್ಜಿ ನಮೂನೆಯನ್ನು ಸ್ವೀಕರಿಸಿದ ಮೇಲೆ, ಸಂಬಂಧಪಟ್ಟ ನೋಡಲ್ ಏಜೆನ್ಸಿಯು ಹೂಡಿಕೆ ಸಮಿತಿಗಳಿಂದ ಅಂದರೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಗಳ ಅನುಮೋದನೆಯನ್ನು ಪಡೆದ ತರುವಾಯ, ನಿಯಮಿಸಿದ ನಮೂನೆಯಲ್ಲಿ ಅರ್ಜಿದಾರರಿಗೆ ಸ್ವೀಕೃತಿ ಪ್ರಮಾಣ ಪತ್ರವನ್ನು ಹೊರಡಿಸತಕ್ಕದ್ದು:

ಪರಂತು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಅದನ್ನು ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಪರಿಗಣಿಸತಕ್ಕದ್ದು.

(2) ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು ಮತ್ತು ಇದರೊಂದಿಗೆ, ಈ ಮುಂದಿನವುಗಳಿಗೆ ಸಂಬಂಧಪಟ್ಟಂತೆ ಸಂಪೂರ್ಣ ವಿವರಗಳನ್ನೊಳಗೊಂಡ ಉದ್ಯಮದಾರರ ಮಾರ್ಗದರ್ಶಿಯೊಂದನ್ನು ತಯಾರಿಸತಕ್ಕದ್ದು ಮತ್ತು ನಿಯತವಾಗಿ ಅದನ್ನು ಇಂದಿನವರೆಗೆ ಪರಿಷ್ಕರಿಸತಕ್ಕದ್ದು.-

(i) ರಾಜ್ಯ ಮತ್ತು ಕೇಂದ್ರ ಕೈಗಾರಿಕಾ ನೀತಿಗಳು;

(ii) ಇಲಾಖೆ ಮತ್ತು ಪ್ರಾಧಿಕಾರಗಳಿಂದ ಅಗತ್ಯವಿರುವ ಒಪ್ಪಿಗೆಗಳನ್ನು ಪಡೆಯಲು ಇರುವ ಕಾರ್ಯವಿಧಾನಗಳು;

(iii) ರಾಜ್ಯದಲ್ಲಿ ಈಗ ಇರುವ ಕೈಗಾರಿಕಾ ಸ್ಥಾನಮಾನಗಳ ಮತ್ತು ಪ್ರಯೋಜನಗಳ ಬಗ್ಗೆ ಮಾಹಿತಿ;

(iv) ಒಂದು ಕೈಗಾರಿಕೋದ್ಯಮಕ್ಕೆ ಅನ್ವಯವಾಗುವ ಅಧಿನಿಯಮಗಳು ಮತ್ತು ಅವುಗಳ ಅಡಿಯಲ್ಲಿ ರಚಿಸಲಾದ ನಿಯಮಗಳ ಮುಖ್ಯಾಂಶಗಳು;

(v) ಉದ್ಯಮದಾರರಿಗೆ ಪ್ರಯೋಜನಕಾರಿಯಾಗುವ ಇತರ ಯಾವುದೇ ಮಾಹಿತಿ.

(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮದ ಸಂಬಂಧದಲ್ಲಿ, (1)ನೇ ಉಪಪ್ರಕರಣದ (ಎಚ್) ಖಂಡದ ಅಡಿಯಲ್ಲಿ ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರವು, ಸಂಬಂಧಿತ ಇಲಾಖೆಗಳು ಮಂಜೂರು ಮಾಡಿದ ಅಥವಾ ಹೊರಡಿಸಿದ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಗಳ ಆರಂಭದ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ, ಅದರ ಸ್ವೀಕೃತಿಯ ದಿನಾಂಕದಿಂದ, 2ನೇ ಪ್ರಕರಣದ (iii)ನೇ ಉಪಪ್ರಕರಣದಲ್ಲಿ ಪರಿಭಾಷಿಸಿದಂತೆ ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗಾಗಿ ಒಪ್ಪಿಗೆ ನೀಡಿಕೆಗಳು ಎಂಬುದಾಗಿ ಭಾವಿಸತಕ್ಕದ್ದು:

ಪರಂತು, ಕೈಗಾರಿಕೆಯ ರಚನೆಗಾಗಿ ಅಂಥ ಭಾವಿತ ಒಪ್ಪಿಗೆ ನೀಡಿಕೆಯು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಭೂಮಿಗೆ ಮಾತ್ರವೇ ಆಗಿರತಕ್ಕದ್ದು. ಮುಂದುವರೆದು, ಕಟ್ಟಡ ಉಪವಿಧಿಯ ಅನುಸಾರವಾಗಿ ನಿರ್ಮಾಣದಲ್ಲಿ ಮತ್ತು ಅನ್ವಯಿಸಬಹುದಾದ ಯಾವುದೇ ಅಧಿನಿಯಮ ಅಥವಾ ಅಂಥ ನಕ್ಷೆಯು ಜಾರಿಯಲ್ಲಿರುವ ಪ್ರಮುಖ ನಕ್ಷೆಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಬಳಕೆಯಲ್ಲಿ ಯಾವುದೇ ಅನ್ಯಮಾರ್ಗವಿರತಕ್ಕದ್ದಲ್ಲ;

ಮತ್ತು ಪರಂತು, ಅನುಮೋದನೆಗಳು ಸ್ಪಷ್ಟ ಹಕ್ಕು (clear title) ಇಲ್ಲದ ಭೂಮಿ ಅಥವಾ ವಿವಾದಿತ, ನರ್ಬಂಧಿತ ಪ್ರರ್ಗಗಳು ಮುಂತಾದವುಗಳ ಅಡಿಯಲ್ಲಿ ಬರುವ ಭೂಮಿಗಳ ಬಳಕೆಗಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮಗಳನ್ನು ಹಕ್ಕುಳ್ಳವರನ್ನಾಗಿ ಮಾಡತಕ್ಕದ್ದಲ್ಲ. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಬಹುದಾದ ಅಥವಾ ಬಳಸಬಹುದಾದ ಪ್ರದೇಶದ ಗರಿಷ್ಠ ಪರಿಮಿತಿಯಲ್ಲಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 109ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳಲ್ಲಿರುವಂತೆ ಮಿತಿಯಲ್ಲಿರತಕ್ಕದ್ದು.

ವಿವರಣೆ: (3)ನೇ ಉಪಪ್ರಕರಣದ ಅನುಸಾರವಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸ್ಥಾಪನೆಯಾದರೆ, ವಾಣಿಜ್ಯ ಕಾರ್ಯಾಚರಣೆಯ ಪ್ರಾರಂಭಕ್ಕೆ ಮೊದಲು, 14ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಅನುಸಾರವಾಗಿ ಅಗತ್ಯ ಒಪ್ಪಿಗೆಗಳನ್ನು ಅರ್ಜಿದಾರರು ಪಡೆಯುವುದು.

(4) ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಮತ್ತು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಹಲವು ಶಾಸನಗಳು, ಅಧಿನಿಯಮಗಳು, ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ನೋಡಲ್ ಏಜೆನ್ಸಿಯ ಮೇರೆಗೆ ವಹಿಸಲಾದ ಹಲವು ಆಡಳಿತಾತ್ಮಕ ಅಥವಾ ಕ್ರಮಕೈಗೊಳ್ಳುವ ಇಲಾಖೆಗಳಿಗೆ (line departments) ನೆರವು ನೀಡುವುದು.

(5) ಅರ್ಜಿಗಳು ಅಥವಾ ಪ್ರಸ್ತಾವನೆಗಳು ಮತ್ತು ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರದ ದಾಖಲೆಯನ್ನು ನಿಗಾವಹಿಸುವುದು ಮತ್ತು ನರ್ವಹಿಸುವುದು.

(6) ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು, ಎಲ್ಲಾ ಯೋಜನೆ ಅರ್ಜಿಗಳು, ಅನುಮೋದನೆಗಳು ಅಥವಾ ಸ್ವೀಕೃತಿಗಳ ದತ್ತಾಂಶಮೂಲವನ್ನು (Database) ಕೇಂದ್ರ ಸಂಗ್ರಹವಾಗಿ ಆನ್ ಲೈನ್ ವ್ಯವಸ್ಥೆಗಳ ಮೂಲಕ ನಿರ್ವಹಿಸುವುದು.

ವಿವರಣೆ: ಸ್ವೀಕೃತಿ ಪ್ರಮಾಣ ಪತ್ರದ ವ್ಯಾಪ್ತಿಯ ಅಡಿಯಲ್ಲಿ ಅಗತ್ಯವಾಗಿ ಬರಬೇಕಾದ ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳನ್ನು ಉತ್ಪಾದನಾ ಉದ್ಯಮಗಳ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಯ ಆರಂಭದ ದಿನಾಂಕದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇಲಾಖೆಗಳು ನೀಡಿದ ಒಪ್ಪಿಗೆ ನೀಡಿಕೆಗಳೆಂದು ಪರಿಗಣಿಸತಕ್ಕದ್ದು. ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳ ಪಟ್ಟಿಯು 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಒಪ್ಪಿಗೆ ನೀಡಿಕೆಗಳನ್ನು ಒಳಗೊಂಡಿರತಕ್ಕದ್ದು.

14. ಸಂಯೋಜಿತ ಅರ್ಜಿ ನಮೂನೆಗಳು .- XX XX XX

(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, ಅನ್ವಯಿಸಬಹುದಾದ ಅಧಿನಿಯಮಗಳು, ನಿಯಮಗಳು ಇತ್ಯಾದಿಗಳ ಅಡಿಯಲ್ಲಿ ಘಟಕದ ನಿರತ ಕಾರ್ಯಾಚರಣೆಗಾಗಿ ಸಂಬಂಧಿತ ಅರ್ಜಿಗಳನ್ನು ನಿಯಮಿಸಿದ ಕಾಲಕ್ರಮಗಳಲ್ಲಿ, ಅಂದರೆ ಸ್ವೀಕೃತಿ ಪ್ರಮಾಣ ಪತ್ರವು ಮುಕ್ತಾಯಗೊಳ್ಳುವ ಆರು ತಿಂಗಳುಗಳಿಗೆ ಮೊದಲು ಸಲ್ಲಿಸತಕ್ಕದ್ದು. 13ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಸದರಿ ಕೈಗಾರಿಕೆಗೆ ಅಥವಾ ಉದ್ಯಮಕ್ಕೆ ಹೊರಡಿಸಲಾದ ಸ್ವೀಕೃತಿ ಪ್ರಮಾಣ ಪತ್ರವು ಈ ಉಪಪ್ರಕರಣದ ಅಡಿಯಲ್ಲಿ ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಅವಶ್ಯಪೂರ್ವ ದಸ್ತಾವೇಜು ಆಗಿರತಕ್ಕದ್ದು.

ವಿವರಣೆ: 2ನೇ ಪ್ರಕರಣದ (iii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಅನ್ವಯಿಸಬಹುದಾದ ಅಧಿನಿಯಮಗಳು ಮತ್ತು ನಿಯಮಗಳ ಅಡಿಯಲ್ಲಿ ಅಗತ್ಯಪಡಿಸಿದಂತೆ ಸ್ವೀಕೃತಿ ಪ್ರಮಾಣ ಪತ್ರವು ಎಲ್ಲಾ ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳಿಗಾಗಿ ಅನುಮೋದನಾ ದಸ್ತಾವೇಜು ಆಗಿರತಕ್ಕದ್ದು ಹಾಗೂ ನಿರ್ಮಾಣ ಅಥವಾ ಸ್ಥಾಪನೆಯ ಪ್ರಾರಂಭಕ್ಕೆ ಮೊದಲು ಅಗತ್ಯವಿರುವ ಅನುಮೋದನೆಗಳಾದ ಅನುಮೋದನೆ ಅಥವಾ ಒಪ್ಪಿಗೆ ನೀಡಿಕೆಯನ್ನು ಸ್ವೀಕರಿಸಿದೆ ಎಂಬುದಾಗಿ ಭಾವಿಸತಕ್ಕದ್ದು.

XX XX XX

16. ತಪಾಸಣೆ.- ಸ್ವೀಕೃತಿ ಪ್ರಮಾಣ ಪತ್ರದ ಸಿಂಧುತ್ವದ ಅವಧಿಯಲ್ಲಿ ತಪಾಸಣೆಗಳನ್ನು ವಾರೆಂಟು ಮಾಡಲಾದ ನಿದರ್ಶನಗಳಲ್ಲಿ, ನೋಡಲ್ ಏಜೆನ್ಸಿಯ ಸಮಾಲೋಚನೆ ಮತ್ತು ಸಂಬಂಧಿತ ಇಲಾಖಾ ಮುಖ್ಯಸ್ಥರ ಅನುಮೋದನೆಯೊಂದಿಗೆ ನಿಯಮಿಸಬಹುದಾದ ಅಂಥ ಮಾರ್ಗ ತಪಾಸಣೆಯನ್ನು ಕೈಗೊಳ್ಳತಕ್ಕದ್ದು.

XX XX XX

19. ದಂಡ :- XX XX XX

(2) ಯಾವುದೇ ಉತ್ಪಾದನಾ ಕೈಗಾರಿಕೆ ಅಥವಾ ಉದ್ಯಮವು ಸ್ವೀಕೃತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ನೋಡಲ್ ಏಜೆನ್ಸಿಗೆ ನೀಡಿದ ಮುಚ್ಚಳಿಕೆ ಅಥವಾ ಸ್ವಯಂ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ಕೈಗಾರಿಕಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅನ್ವಯಿಸಬಹುದಾದ ಅಧಿನಿಯಮ ಅಥವಾ ನಿಯಮದಲ್ಲಿನ ಯಾವುದೇ ಖಂಡವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣೀತವಾದ ಮೇಲೆ ಮೊದಲ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಎರಡನೇ ಹಾಗೂ ಮುಂದುವರಿದ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತವಾಗತಕ್ಕದ್ದು ಇದರ ಜೊತೆಗೆ, ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮವನ್ನು ಪ್ರಾರಂಭಿಸತಕ್ಕದ್ದು.

XX XX XX

KARNATAKA LEGISLATIVE ASSEMBLY

SIXTEENTH LEGISLATIVE ASSEMBLY

TENTH SESSION

THE KARNATAKA INDUSTRIES (FACILITATION) (AMENDMENT) BILL, 2026
(LA Bill No. 19 of 2026)

A Bill further to amend the Karnataka Industries (Facilitation) Act, 2002.

Whereas, it is expedient to amend the Karnataka Industries (Facilitation) Act, 2002 (Karnataka Act No. 45 of 2003) for the purposes hereinafter appearing;

Be it enacted by Karnataka State Legislature in the seventy seventh year of the Republic of India as follows:-

1. Short title and commencement.- (1) This Act may be called the Karnataka Industries (Facilitation) (Amendment) Act, 2026.

(2) It shall come into force at once.

2. Amendment of section 2.- In the Karnataka Industries (Facilitation) Act, 2002 (Karnataka Act No. 45 of 2003)(hereinafter referred to as the Principal Act), in section 2,-

(i) in clause (ia) , after the words, figures and brackets "the Karnataka Town and Country planning Act, 1961 (Karnataka Act 11 of 1963)", the words, figures and brackets "the Greater Bengaluru Governance Act, 2024 (Karnataka Act 36 of 2025), the Water (Prevention and Control of Pollution) Act, 1974 (Central Act 6 of 1974), the Air (Prevention and Control of Pollution) Act, 1981 (Central Act 14 of 1981), the Environment (Protection) Act, 1986 (Central Act 29 of 1986), the Karnataka Minor Mineral Concession Rules, 1994" shall be inserted;

(ii) after clause (ia), the following shall be inserted, namely:-

"(i-b) "Applicant" means an entrepreneur, person, body of persons, company, partnership firm, limited liability partnership or other business entity submitting an application under this Act for obtaining any approval, clearance, licence, permission, consent, registration, certificate, acknowledgement or other service;"

(iii) for clause (ii), the following shall be substituted, namely:-

"(ii) "Authority" means any Department, Board, Corporation, Local Authority, Statutory Body, Office, Agency, or other authority established by or under the State Government, including those Authorities specified in Schedule-I or such other Authority as may be notified by the State Government from time to time, which is entrusted with the power or responsibility to grant, issue, approve, renew, amend or otherwise administer any clearance, licence, registration, permit, consent, authorization or service;"

(iv) after clause (ii) as so substituted, the following shall be inserted, namely:-

